Regd. No. BG 155 21-3-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ.16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ.

ಸ್ಥಾಪಕರು : ಅರಮನೆ ಸರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಪಾಕಿಸ್ತಾನಕ್ಕೆ ರೂ. 480 ಕೋಟಿ ಮಿಲಿಟರಿ ಸಲಕರಣೆಗಳು

ಮೈಸೂರು ನಜರಬಾದು ರಾಣಾ ಪ್ಯಾಲೇಸ್ ಆವರಣದಲ್ಲಿ ಹಾಕಿರುವ
— ನಮ್ಮ ಸ್ವಂತ ಥಿಯೇಟರ್‌ನಲ್ಲಿ —
11-3-69 ರಿಂದ ಪ್ರಾರಂಭ – ಪ್ರತಿದಿನ ಸಂಜೆ 6-30 ರಿಂದ 12-30 ರವರೆಗೆ
ವಿವಿಧ ವಿನೋದಾವಳಿಗಳು --
ಮಲಬಾರಿನ ನುರಿತ ಸರ್ಕಸ್‌ನವರಿಂದ ಸರ್ಕಸ್
ಎಲ್. ವಿ. ಬಾಬುರವರ ಮ್ಯಾಜಿಕ್ — ಆಂಧ್ರದ ನರ್ತಕಿಯರಿಂದ ನರ್ತನ
ಪ್ರವೇಶ ಧನ 25 ಪೈಸೆ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಯಾರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ಸೇತ್ರದಾನಿ ಡಾ|| ಎಂ.ಸಿ.ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತಿಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಕನ್ನಡ ಚಳವಳಿ

ಭದ್ರಾವತಿ— ಯುಗಾದಿ ದಿನದಂದು ಯುನಿಕರ್ ತಂಡವೊಂದು ಚಲಚಿತ್ರ ಮಂದಿರಗಳಲ್ಲಿ ತಮಿಳು ಭಿತ್ತಿಪತ್ರಗಳನ್ನು ಕಿತ್ತು ಹಾಕಿ, ಕನ್ನಡ ಚಿತ್ರಗಳನ್ನು ಮಾತ್ರ ಪ್ರದರ್ಶಿಸಬೇಕೆಂದು ಘೋಷಣೆ ಮಾಡಿದರು – ಕೆಲವು ಅಂಗಡಿಗಳಿಗೆ ನುಗ್ಗಿ ಅಲ್ಲಿ ಬಿಕರಿಗಿಡಲಾಗಿದ್ದ ತಮಿಳು ಪುಸ್ತಕಗಳನ್ನು ಹದುಹಾಕಿದರು – ಮುನಿಸಿಪಲ್ ಮಾರ್ಕೆಟ್ಟಿನಲ್ಲಿ ಕಂಡ ತಮಿಳು ತಾರೆ ಚಿತ್ರವಿದ್ದ ಕ್ಯಾಲಂಡರನ್ನು ತೆಗೆದು ಅಲ್ಲಿ ಕನ್ನಡ ತಾರೆ ಚಿತ್ರವಿದ್ದ ಕ್ಯಾಲೆಂಡರನ್ನು ಇಟ್ಟರು – ಒಂದು ಸಿನಿಮಾದಲ್ಲಿ ರಿಜರ್ವು ಪೋಲೀಸರ ಉಸ್ತುವಾರಿಯಲ್ಲಿ ತಮಿಳು ಚಿತ್ರ ಪ್ರದರ್ಶಿಸಲ್ಪಟ್ಟಿತು – ಇಬ್ಬರನ್ನು ಪೋಲೀಸರು ಪ್ರಶ್ನಿಸಲು ಪೇತ್ನಿಗೆ ಕರೆದುಕೊಂಡು ಹೋದರು.

★

ಸಾಂಕೇತಿಕ ಮುಷ್ಕರ

ಬೊಂಬಾಯಿ— ಪೆಟ್ರೋಲು, ಲೂಬ್ರಿಕೇಟಿಂಗ್ ಆಯಿಲ್‌ಗಳ ಟಿನ್ ಹೆಚ್ಚಿಕೆಯನ್ನೂ, ಪೋಲೀಸು ಮತ್ತು ಅಕ್ಕಾಯ್‌ರವರ ಹಿಂಸೆಯನ್ನೂ ಪ್ರತಿಭಟಿಸಿ, ನಿನ್ನೆ ರಾಜ್ಯದ 26000 ಟ್ರಕ್ ಆಪರೇಟರರು ಸಾಂಕೇತಿಕ ಮುಷ್ಕರ ನಡೆಸಿದ್ದರಿಂದ ರಸ್ತೆಗಳ ಮೂಲಕ ಪದಾರ್ಥಗಳ ರವಾನಿಕೆ ತಣ್ಣಗಾಗಿತ್ತು.

★

ಮುಖ್ಯಮಂತ್ರಿಗಳವರು

ಗುಲ್ಬರ್ಗ— ಒಂದು ಲಕ್ಷ ಎಕ್ರೆ ಭೂಮಿಗೆ ನೀರು ಒದಗಿಸುವ ರೂ. 16 ಕೋಟಿಯ ಕರಂಜಿಯಾ ಪ್ರಾಜೆಕ್ಟನ್ನು ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಕೈಗೊಳ್ಳಲಾಗುವುದೆಂದು ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಹೇಳಿದರು – ಅಲ್ಲಿ ಚನ್ನಬಸವೇಶ್ವರ ಕಾಲೇಜಿನ ಶಂಕುಸ್ಥಾಪನೆ ಮಾಡಿದರು ಮುಖ್ಯಮಂತ್ರಿಗಳಿಗೆ ಹಾಕಿದ ರಾಶಿಗಟ್ಟಿ ಹೂಹಾರಗಳನ್ನು ಹರಾಜುಹಾಕಿ ದೊರೆತ ರೂ. 1.70 ಲಕ್ಷವನ್ನು ಮುಖ್ಯ ಮಂತ್ರಿಗಳು ಕಾಲೇಜಿಗೇ ಕೊಟ್ಟರು.

★

ಅಕ್ಕಿ ವಶ

ಮೈಸೂರು— ಲಾರಿಯಲ್ಲಿ ಮದ್ರಾಸಿಗೆ ಅಕ್ರಮವಾಗಿ ಸಾಗಿಸಲಾಗುತ್ತಿದ್ದ 60 ಮೂಟೆ ಅಕ್ಕಿಯನ್ನು ಬಂಡಿಪುರದಲ್ಲಿ ಹತ್ತಿರ ಪೋಲೀಸರು ವಶಪಡಿಸಿಕೊಂಡು ಡ್ರೈವರನನ್ನು ಬಂಧಿಸಿದರು.

●

ಶ್ರೀಮತಿ ಶೀಲಾ ಇರಾನಿ

ಮೈಸೂರು— ಸುಪ್ರಸಿದ್ಧ ಸಮಾಜ ಕಾರ್ಯಕರ್ತರಾದ ಶ್ರೀಮತಿ ಶೀಲಾ ಇರಾನಿಯವರನ್ನು ವಿಧಾನ ಪರಿಷತ್ತಿಗೆ ಸದಸ್ಯೆಯರಾಗಿ ಗೌರ್ನರ್ ಫಠಕ್‌ರವರು ನಾಮಕರಣ ಮಾಡುವರು.

●

ಶ್ರೀ ಕೃಷ್ಣ ಪೂಜೆ

ಉಡುಪಿ— ಪಲಿಮಾರು ಮಠವನ್ನು ಭಂಡಾರೇರಿ ಸುಶ್ರೀ ಸ್ವಾಮಿಗಳಿಗೆ ವರ್ಗಾಯಿಸಿರುವ ಮತ್ತು ಅವರು ಶ್ರೀಕೃಷ್ಣ ಪೂಜೆ ಮಾಡುವಂತೆ ಪ್ರಾರ್ಥಿಸಲಾಗಿದ್ದ ಅರ್ಜಿಯನ್ನು ಮುನ್ಸಿಫರು ವಜಾ ಮಾಡಿರುವರು.

★

ಪಾಕಿಸ್ತಾನಕ್ಕೆ ಮಿಲಿಟರಿ ಸಲಕರಣೆ

ನವದೆಹಲಿ— ಕಳೆದ 3 ವರ್ಷಗಳಲ್ಲಿ ವಿವಿಧ ಕಡೆಗಳಿಂದ ಪಾಕಿಸ್ತಾನಕ್ಕೆ ರೂ. 480 ಕೋಟಿ ಮಿಲಿಟರಿ ಸಲಕರಣೆಗಳನ್ನು ಪಡೆದಿರುವುದಾಗಿ ಅಂದಾಜು ಎಂದು ರಾಜ್ಯ ಸಭೆಯಲ್ಲಿ ತಿಳಿಸಲಾಯಿತು.

★

1 ಪೆನ್ನಿಗೆ 2600 ಪೌಂಡುಗಳು

ಲಂಡನ್— 1933 ರ ಒಂದು ಇಂಗ್ಲೀಷ್ ಪೆನ್ನಿಗೆ ಹರಾಜಿನಲ್ಲಿ 2600 ಪೌಂಡುಗಳು ದೊರೆತವು – 1933 ರಲ್ಲಿ ತಯಾರಿಸಿದ ಎಂಟು ಪೆನ್ನಿಗಳಲ್ಲಿ ಇದೊಂದು ಎಂದು ನಂಬಲಾಗಿದೆ.

★

ಭಾಷಾವಾರು

ನವದೆಹಲಿ— ರಾಜ್ಯಗಳ ಭಾಷಾವಾರು ವಿಂಗಡನೆ ವಿರುದ್ಧ ಪುನರ್ವ್ಯವಸ್ಥೆಗೆ ಸರಕಾರದ ವಿರೋಧವಿದೆ ಎಂದು ರಾಜ್ಯ ಸಭೆಯಲ್ಲಿ ತಿಳಿಸಲಾಯಿತು.

★

ಗುರಿಗಿಂತ ಹೆಚ್ಚು

ನವದೆಹಲಿ— ಸರ್ಕಾರದ ಗುರಿ 7 ಮಿಲಿಯ ಟ್ ಆಹಾರಧಾನ್ಯ ಬಫರ್ ಸ್ಟಾಕಿದ್ದು, ಈಗ ಅದಕ್ಕಿಂತ ಹೆಚ್ಚು ದೊರೆಯಬಹುದೆಂದು ನಿರೀಕ್ಷಿಸಲಾಗಿದೆ.

○

ದೇವಸ್ಥಾನಕ್ಕೆ ಆನೆ ದಾನ

ಮಡಕೇರಿ— ಸರ್ಕೋಕ್ ಕ್ಯಾಂಡಿಯಲ್ಲಿನ ಬುದ್ಧನ ಹಲ್ಲಿನ ದೇವಾಲಯಕ್ಕೆ ದುಬ್ಬರಿ ಆನೆ ಶಿಬಿರಲ್ಲಿರುವ 29 ವರ್ಷದ ಜಯರಾಜ್ ಎಂಬ ಆನೆಯನ್ನು ಭಾರತ ಸರಕಾರ ಉದಾರದಾನ ಮಾಡಿರುವರು.

ತಿರುಪತಿ— ಯಾತ್ರಿಕರ ಸೌಕರ್ಯಕ್ಕಾಗಿ ದೇವಸ್ಥಾನವು ಬೆಳಿಗಿನ ಜಾವ 4 ಗಂಟೆಗೆ ಬದಲು 3 ಗಂಟೆಗೆ ತೆಗೆಯಲಾಗುವುದು.

ಗೋಮಾಂಸ ಭಕ್ಷಣೆ ವಿಷಯದಲ್ಲಿ — ಕಮಿಷನರಿಗೆ ಕಲೆಕ್ಟರ್ ಬುದ್ಧಿ ಕಲಿಸಿದ

*

ಬ್ರಿಟಿಷರ ಆಡಳಿತ ಕಾಲದಲ್ಲಿ ಒಬ್ಬ ಯೌವನಸ್ಥನು (ಬ್ರಾಹ್ಮಣ) ಇಂಗ್ಲೆಂಡಿಗೆ ಹೋಗಿ, ಕೆಲ ವರ್ಷಗಳಲ್ಲಿ ಐ ಸಿ ಎಸ್ ಪರೀಕ್ಷೆಯಲ್ಲಿ ತೇರ್ಗಡೆಗೊಂಡು, ನಂತರ ಭಾರತಕ್ಕೆ ಬಂದಾಗ ಆಗಿನ ಸಂಯುಕ್ತ ಪ್ರಾಂತ್ಯದಲ್ಲಿನ ಇಟವಾ ಜಿಲ್ಲೆಗೆ ಕಲೆಕ್ಟರಾಗಿ ನೇಮಿಸಲ್ಪಟ್ಟರು.

ಒಂದು ಸಾರಿ, ಆಗ ಆಗ್ರಾ ಕಮಿಷನರ್ ಆಗಿದ್ದ (ಪ್ರಖ್ಯಾತ ಇತಿಹಾಸಕಾರ) ಸರ್ ವಿನ್ಸೆಂಟ್ ಸ್ಮಿತ್, ತಾವು ಇಟವಾ ಕಲೆಕ್ಟರ್‌ರ ಮನೆಗೆ ಬರುವುದಾಗಿ ತಿಳಿಸಿದರು. ಐರೋಪ್ಯ ಮನೋಭಾವದ ಬ್ರಾಹ್ಮಣ ಕಲೆಕ್ಟರರು, ತನ್ನ ಮುಸ್ಲಿಂ ಅಡಿಗೆಯವನಿಗೆ ವಿಶೇಷ ರೀತಿಯ ಆಹಾರ ತಯಾರಿಸುವಂತೆ ತಿಳಿಸಿದನು.

ಆ ಪೈಕಿ ಕಮಿಷನರರ ಊಟದ ಮೇಜಿನ ಮೇಲೆ ಒಂದು ತಟ್ಟೆಯಲ್ಲಿ ಬೇಯಿಸಿದ ಗೋಮಾಂಸವಿದ್ದಿತು. ಕಮಿಷನರು ಅದನ್ನು ಒಂದು ಕಡಿಗೆ ತಳ್ಳಿ, ಅದನ್ನು ಅಲ್ಲಿಂದ ತೆಗೆಸಿದರು. ಕಮಿಷನರರಿಗೆ ಆದೇಸ್ತೆಂಬುವ ಗೊತ್ತಾಗಲಿಲ್ಲವೆಂದು ಭಾವಿಸಿದ ಕಲೆಕ್ಟರು, ಆ ತಟ್ಟೆಯಲ್ಲಿನದು ಗೋಮಾಂಸವೆಂದು ತಿಳಿಸಿದನು.

ಕಮಿಷನರು, ಅದು ಗೋಮಾಂಸವೆಂಬುದು ತಮಗೆ ಗೊತ್ತಿತ್ತೆಂದು ಹೇಳಿ 'ನಾನು ಗೋಮಾಂಸ ತಿನ್ನುವುದಿಲ್ಲವೆಂದಲ್ಲ, ಆದರೆ ಈ ದೇಶದ ಬಹುಸಂಖ್ಯಾತ ಜನರು ಗೋಮಾತೆಯನ್ನು ಭಕ್ತಿಯಿಂದ ಕಂಡು ಪೂಜಿಸುವರು ಮತ್ತು ಈ ನಿಷೇಧಿತ ಗೋಮಾಂಸವನ್ನು ತಿನ್ನುವುದಿಲ್ಲ ; ಆದ್ದರಿಂದ ನಾನು ಇಲ್ಲಿರುವವರೆಗೆ ಈ ದೇಶದ ನಿವಾಸಿಗಳ ಧಾರ್ಮಿಕ ಭಾವನೆಗೆ ನೋವುಂಟಾಗದಂತೆ ಆಚರಿಸಲು ನನ್ನ ಮನಸ್ಸಾಕ್ಷಿ ಬೋಧಿಸುತ್ತದೆ" ಎಂದು ಹೇಳಿದರು. ಮಿ|| ಸ್ಮಿತ್‌ರ ಈ ಮಾತನ್ನು ಕೇಳಿದ ಬ್ರಾಹ್ಮಣ ಕಲೆಕ್ಟರು ತಲೆ ಬಗ್ಗಿಸಿದರು !

MYSORE CITY MUNICIPALITY

No. D 2/TN/33/68-69

Office of the Executive Engineer,
City Municipal Council,
Mysore. Dated : 28-2-69

BRIEF TENDER NOTIFICATION :

Sealed Tenders in the prescribed forms issued by this Office will be received by the undersigned for the following works upto 4-00 P.M. on 28-3-69.

Sl No.	Name of work	Amount put to tender	E.M.D	Time Limit	Class of Contractor
		Rs.	Rs.		
1.	Construction of a Twin Block Quarters for Class III Officials at K.R. Vanam, Mysore.				
(a)	-do- Blok No.I	23,121/-	578/-	Six Months	IV and above.
(b)	-do- Block No II	23,121/-	578/-	do	do
(c)	-do- Block No.III	23,121/-	578/-	do	do
(d)	-do- Block No.IV	23,121/-	578/-	do	do
(e)	-do- Block No V	23,121/-	578/-	do	do
(f	-do- Block No.VI	23 121/-	578/-	do	do

Note : Further particulars and the tender Forms may be had from the Office upto 5-30 P M. on 27-3-1969 on production of duplicate Municipal Treasury Challan for having credited Rs. 5/- being the cost of tender form

Sd/ S N. Veerappa,
Municipal Executive Engineer,
Mysore City.

ವುಡ್‌ಲ್ಯಾಂಡ್ಸ್ 21-3-69 ರಿಂದ

ಅಮೋಘ ಆರಂಭ

— ಚಿತ್ತಾಕರ್ಷಕ ಹಿಂದಿ ಈಸ್ಟ್‌ಮನ್ ಕಲರ್ ಚಿತ್ರ —

ಮೇರೆ ಹುಜೂರ್

ಪಾತ್ರ— ಮಾಲಾಸಿನ್ಹಾ, ರಾಜಕುಮಾರ್, ಜಿತೇಂದ್ರ, ಜಾನೀವಾಕರ್

ಸಂಗೀತ : ಶಂಕರ್ ಜೈಕಿಷನ್

[ದಿನ 3 ಪ್ರದರ್ಶನಗಳು]

ಅಪೆರಾ— 19-3-69 ರಿಂದ

— ಅತ್ಯಮೋಘ ತಮಿಳು ಚಿತ್ರ —

ಪರಾಶಕ್ತಿ

ಪಾತ್ರ : ಶಿವಾಜಿ ಗಣೇಶ್ ಪಂಢರಿಬಾಯಿ, ರಾಜೇಂದ್ರನ್

.... ದಿನವಹಿ 3 ಆಟಗಳು ....

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H.H. the Maharaja of Mysore and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav Shenoi, Sri Opera Talkies, Padmabhushana Dr. M.C. Modi, Dr. R. S. Nanjunda swamy (Glasgow) Sri Ananthanarasimha Iyengar (Honganur) have generously extended donations and best wishes

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Help The Gorakshana

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Niratara V. S Krishna Rao (Proprietor) at the Satyavadi Press Chamarajapuram, Mysore 4